
# ನಮ್ಮ ಸಂಸ್ಕೃತಿ ಪರಿಚಯ - ೭

ಆಂಗ್ಲ ಮೂಲ : ಸೀತಾ ಲಖಾನಿ; ಕನ್ನಡ ಅನುವಾದ : ರಘು ಎ.ಎನ್.



**ಒಂದೇ ದೇವರು ಹಲವು ಹೆಸರು ಮತ್ತು ರೂಪಗಳಲ್ಲಿದೆ ಎಂದು ಸೂಚಿಸುವ ಕಥೆ:** ಒಂದು ದಿನ ಶಾಲೆಯಲ್ಲಿ ವಿದ್ಯಾರ್ಥಿಯು ಶಿಕ್ಷಕರನ್ನು ಈ ರೀತಿ ಕೇಳಿದನು: "ಒಂದೇ ದೇವರು ಇರುವುದಾದರೆ ಅವನನ್ನೇಕೆ ಬ್ರಹ್ಮ ವಿಷ್ಣು ದುರ್ಗೆ ಎಂದು ಮತ್ತು ಇತರ ಬೇರೆ ಧರ್ಮಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ?" ಶಿಕ್ಷಕರು ಆ ವಿದ್ಯಾರ್ಥಿಯನ್ನು ಮರುದಿನ ತಮ್ಮ ಮನೆಗೆ ಬರುವಂತೆ ಹೇಳಿದರು. ಇದೇ ಸಮಯದಲ್ಲಿ ಶಿಕ್ಷಕರು ವೃತ್ತ, ಚೌಕ ಹಾಗೂ ನಕ್ಷತ್ರದ ಆಕಾರಗಳಲ್ಲಿ ಮಂಜುಗಡ್ಡೆಯನ್ನು ತಯಾರಿಸುವ ಸಲಕರಣೆಗಳನ್ನು ಮನೆಗೆ ತೆಗೆದುಕೊಂಡು ಹೋದರು. ಮರುದಿನ ವಿದ್ಯಾರ್ಥಿಯು ಅವರ ಮನೆಗೆ ಬಂದಾಗ ಶಿಕ್ಷಕರು ಚೌಕಾಕಾರದ, ವೃತ್ತಾಕಾರದ ಮತ್ತು ನಕ್ಷತ್ರಾಕಾರದಲ್ಲಿ ತಯಾರಿಸಿದ್ದ ಮಂಜುಗಡ್ಡೆಗಳನ್ನು ತೋರಿಸುತ್ತಾ ಕೇಳಿದರು, "ಇವೆಲ್ಲಾ ಬೇರೆ ಬೇರೆ ರೀತಿಯಲ್ಲಿವೆಯೆ?" ವಿದ್ಯಾರ್ಥಿಯು "ಹೌದು" ಎಂದನು. ಆಗ ಶಿಕ್ಷಕರು, "ನೋಡು, ಅವುಗಳೆಲ್ಲಾ ಬೇರೆ ಬೇರೆ ರೀತಿ, ರೂಪಗಳಲ್ಲಿರುವುದರಿಂದ ನೀನು ಅವುಗಳನ್ನು ವೃತ್ತ, ಚೌಕ ಹಾಗೂ ನಕ್ಷತ್ರದ ಆಕಾರಗಳೆಂದು ಕರೆಯುತ್ತೀಯೆ. ಆದರೆ ಅವುಗಳೆಲ್ಲಾ ಒಂದೇ ನೀರಿನಿಂದ ಮಾಡಿರುವಂಥವು. ಇಲ್ಲಿ ಒಂದೇ ನೀರು ವಿವಿಧ ಆಕಾರಗಳನ್ನು ಪಡೆದಿದೆ. ಇದರಂತೆಯೇ, ಇರುವ ಒಂದೇ ದೈವವನ್ನು ವಿವಿಧ ಜನರು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಹಿಂದೂಗಳು ವಿಷ್ಣುವೆಂದು, ಶಿವನೆಂದು, ತಾಯಿ ದುರ್ಗೆಯೆಂದು ಕರೆಯುತ್ತಾರೆ. ಇತರ ಧರ್ಮದವರು ಅವರವರ ಧರ್ಮಕ್ಕೆ ತಕ್ಕಂತೆ ಬೇರೆಬೇರೆಯ ಹೆಸರುಗಳಿಂದ ಕರೆಯುತ್ತಾರೆ."

ಈ ಕಥೆಯು ಒಂದೇ ದೇವರ ಹಲವು ರೂಪಗಳನ್ನು, ಹೆಸರುಗಳನ್ನು ವಿವಿಧ ಧರ್ಮಗಳು ಹೇಗೆ ಕರೆಯುತ್ತವೆ ಎಂಬುದನ್ನು ಸೂಚಿಸುತ್ತದೆ. ಹಾಗೆಯೇ, ಹಲವು ರೂಪ, ಹೆಸರುಗಳಿಂದ ಕರೆದರೂ, ಇರುವುದು ಒಂದೇ ದೇವರೆಂದು ತಿಳಿಸಿಕೊಡುತ್ತದೆ.

**ಹಿಂದೂಧರ್ಮದ ಪವಿತ್ರ ಗ್ರಂಥಗಳು:** ದೇವರನ್ನು ಕಂಡಂತಹ, ನೋಡಿದಂತಹ ಮಹಾಪುರುಷರ ಮೂಲಕ ನಾವು ದೇವರ ಬಗ್ಗೆ ತಿಳಿದುಕೊಳ್ಳಬಹುದು ಎಂದು ಹಿಂದೂಧರ್ಮವು ನಮಗೆ ಕಲಿಸುತ್ತದೆ. ನಾವು ದೇವರ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುವಂತೆ ಅಂಥವರನ್ನು ಪ್ರಾರ್ಥಿಸಿಕೊಳ್ಳಬಹುದು. ಆದರೆ ಅಂತಹ ಮಹಾಪುರುಷರು ಸಿಗುವುದು ತುಂಬಾ ವಿರಳ. ಆದರೆ ಆ ಮಹಾಪುರುಷರು ರಚಿಸಿದಂತಹ ಗ್ರಂಥಗಳನ್ನು ಅಭ್ಯಾಸ ಮಾಡುವುದರಿಂದ, ದೇವರ ಬಗ್ಗೆ ವಿವರವಾಗಿ ಅರಿತುಕೊಳ್ಳಬಹುದು. ಇಂತಹ ಆಧ್ಯಾತ್ಮಿಕ ವಿಷಯವನ್ನು ಒಳಗೊಂಡಿರುವ ಗ್ರಂಥಗಳನ್ನೇ ನಾವು 'ಪವಿತ್ರ ಗ್ರಂಥಗಳು' ಎನ್ನುವುದು.



**ಹಿಂದೂಧರ್ಮವು ಎರಡು ಬಗೆಯ ಪವಿತ್ರ ಗ್ರಂಥಗಳನ್ನು ಹೊಂದಿದೆ.**

ಮೊದಲ ಬಗೆಯ ಗ್ರಂಥಗಳೇ 'ವೇದಗಳು'. ವೇದಗಳು ಹಿಂದೂಧರ್ಮದ ಪ್ರಮುಖ ಗ್ರಂಥಗಳು. ಅವುಗಳಲ್ಲಿ ಋಷಿ ಮುನಿಗಳು ದೇವರನ್ನು ಅನುಭವಿಸಿದಂತಹ ವಿವರಣೆ ಇದೆ. ವೇದಗಳು ದೇವರನ್ನು ಕಾಣಲು ನಮಗೆ ಸಹಕರಿಸುತ್ತವೆ. ಈ ವೇದಗಳು ಅತಿ ಪುರಾತನ ಭಾಷೆಯಾದ 'ಸಂಸ್ಕೃತ'ದಲ್ಲಿ ರಚಿತವಾಗಿವೆ. ಸಂಸ್ಕೃತದಲ್ಲಿ 'ವೇದ'ವೆಂದರೆ 'ಜ್ಞಾನ' ಎಂದರ್ಥ. ಆದ್ದರಿಂದ ವೇದಗಳೆಂದರೆ ದೇವರ ಬಗೆಗಿನ 'ಜ್ಞಾನಗ್ರಂಥಗಳು' ಎಂದಾಗುತ್ತವೆ.

ಉಪನಿಷತ್ತುಗಳು ವೇದಗಳ ವಿಶೇಷ ಭಾಗಗಳಾಗಿವೆ. ಪ್ರತಿಯೊಂದು ವಸ್ತುವೂ ಹೇಗೆ ದೇವರಿಗೆ ಸಂಬಂಧಪಟ್ಟಿದೆ ಎಂಬುದನ್ನು ಈ ಉಪನಿಷತ್ತುಗಳು ತಿಳಿಸಿಕೊಡುತ್ತವೆ ಮತ್ತು ನಮ್ಮ ನೈಜಸ್ವರೂಪವೇ ಆತ್ಮ ಎಂದು ಹೇಳುತ್ತವೆ.


ಭಗವದ್ಗೀತೆಯು ಹಿಂದೂಗಳ ಮತ್ತೊಂದು ಪವಿತ್ರ ಗ್ರಂಥ. ದೇವರನ್ನು ನೋಡಲು ಇರುವ ವಿವಿಧ ದಾರಿಗಳನ್ನು ಇದು ನಮಗೆ ತಿಳಿಸುತ್ತದೆ, ಅವುಗಳೆಂದರೆ ಪೂಜೆ, ಪ್ರಾರ್ಥನೆ, ಧ್ಯಾನ, ಒಳ್ಳೆಯ ಕೆಲಸಗಳನ್ನು ಮಾಡುವುದು ಇತ್ಯಾದಿ. ಇವುಗಳಲ್ಲಿ ನಮಗೆ ಇಷ್ಟವಾದುದನ್ನು ಮಾಡಬಹುದು. ಇವುಗಳೆಲ್ಲದರ ಮೂಲಕವೂ ದೇವರನ್ನು ಕಾಣಬಹುದು. *

# ಅನ್ನಪೂರ್ಣೆ

ಕಥೆ: ಸ್ವಾಮಿ ಕಮಲಾತ್ಮಾನಂದ

ವಿನ್ಯಾಸ: ಶಂಕರ್

**1** ಶಿವನು ತನ್ನ ಲೋಕವಾದ ಕೈಲಾಸದಲ್ಲಿ ವಿಶ್ರಾಂತಿಯನ್ನು ಪಡೆಯುತ್ತಿದ್ದನು. ಪಾರ್ವತಿದೇವಿಯು ಹಿಂದಿನಿಂದ ತಮಾಷೆಗಾಗಿ ಶಿವನ ಎರಡೂ ಕಣ್ಣುಗಳನ್ನು ತನ್ನ ಕೈಗಳಿಂದ ಮುಚ್ಚಿದಳು.




**2** ಶಿವನ ಎರಡು ಕಣ್ಣುಗಳು ಸೂರ್ಯ–ಚಂದ್ರರು. ಶಿವನ ಕಣ್ಣುಗಳನ್ನು ಮುಚ್ಚಿದ್ದರಿಂದ ಜಗತ್ತೆಲ್ಲ ಕತ್ತಲಿನಲ್ಲಿ ಮುಳುಗಿಹೋಯಿತು.







ದೇವತೆಗಳು, ಭಕ್ತರು ಭಗವಂತನಲ್ಲಿ ಮೊರೆಯಿಟ್ಟರು.





**3** ಜಗತ್ತಿನ ಪರಿಸ್ಥಿತಿಯನ್ನು ಅರಿತು ದೇವಿಗೆ ಭಯವಾಯಿತು. ಶಿವನ ಕಣ್ಣುಗಳನ್ನು ಮುಚ್ಚಿದ್ದ ಕೈಗಳನ್ನು ಹಿಂದಕ್ಕೆ ತೆಗೆದುಕೊಂಡುಬಿಟ್ಟಳು.





4
ನೀನು ಜಗನ್ಮಾತೆ, ನಿನಗೆ ಯಾವ ಪಾಪದ ಸೋಂಕೂ ಉಂಟಾಗುವುದಿಲ್ಲ. ಆದ್ದರಿಂದ ತಪಸ್ಸು ಮಾಡುವ ಆವಶ್ಯಕತೆ ಇಲ್ಲ.
ಆದರೂ ಇದು ಜಗತ್ತಿಗೊಂದು ಉದಾಹರಣೆಯಾಗುವುದು ಖಂಡಿತ. ಮುಂದಾಲೋಚನೆ ಇಲ್ಲದೆ ಮಾಡಿದ ಕೃತ್ಯಕ್ಕಾಗಿ, ನಿಮ್ಮಿಂದ ಸ್ವಲ್ಪಕಾಲ ದೂರವಾಗಿ ಸ್ವತಃ ಶಿಕ್ಷೆ ಅನುಭವಿಸುತ್ತೇನೆ.
5
ದೇವಿಯು ಶಿವನ ಪಾದಗಳಿಗೆ ಎರಗಿ, ಕಾಡಿ ಬೇಡಿ ತಪಸ್ಸು ಮಾಡಲು ಅನುಮತಿ ಪಡೆದಳು.
ಮೊದಲು ನಾನು ಬದರಿಕಾಶ್ರಮಕ್ಕೆ ಹೋಗುತ್ತೇನೆ. ಅಲ್ಲಿ ಕಾತ್ಯಾಯನ ಋಷಿಗಳಿದ್ದಾರೆ. ನನ್ನನ್ನು ಮಗಳಾಗಿ ಪಡೆಯಬೇಕೆಂದು ದೀರ್ಘಕಾಲದಿಂದ ಅವರು ಕಠಿಣ ತಪಸ್ಸನ್ನು ಆಚರಿಸುತ್ತಿದ್ದಾರೆ. ಈಗ ಅವರ ಇಷ್ಟವನ್ನು ಪೂರೈಸುತ್ತೇನೆ.
6
ಪಾರ್ವತಿದೇವಿಯು ಋಷಿಗಳ ಮುಂದೆ ಪ್ರತ್ಯಕ್ಷಳಾದಳು.
ವಿಶ್ವಜನನಿ! ನೀನು ಶಿಶುವಿನಂತೆ ರೂಪತಾಳಿ ಬಂದಿರುವುದನ್ನು ಬಲ್ಲೆ. ಇದು ನಿನ್ನ ಅಪಾರವಾದ ಕರುಣೆಯನ್ನು ಸೂಚಿಸುತ್ತದೆ. ನಿನ್ನನ್ನು ಮಗಳಾಗಿ ಸ್ವೀಕರಿಸುತ್ತೇನೆ. ನಿನ್ನ ಹೆಸರು ಕಾತ್ಯಾಯಿನಿ.
7
ಬಾಲ್ಯದಿಂದಲೂ ಕಾತ್ಯಾಯಿನಿ ದೈವಭಕ್ತೆಯಾಗಿಯೇ ಬೆಳೆದಳು. ಅವಳು ಈಗ ಯುವತಿಯಾಗಿದ್ದಾಳೆ.
ಇದೇ ಸಮಯದಲ್ಲಿ ಕಾಶೀಪಟ್ಟಣದಲ್ಲಿ ಘೋರವಾದ ಕ್ಷಾಮ ಉಂಟಾಗಿದೆಯೆಂಬ ಸುದ್ದಿ ತಿಳಿದುಬಂದಿತು.
ಅಪ್ಪಾ, ನಾನು ಕಾಶಿಗೆ ಹೋಗಿ ಪ್ರಜೆಗಳ ಕಷ್ಟನಿವಾರಣೆ ಮಾಡಬೇಕೆಂದಿದ್ದೇನೆ, ದಯವಿಟ್ಟು ಅಪ್ಪಣೆ ನೀಡಿ.
ಮಗಳೇ, ರಾಣಿಯ ಹಾಗೆ ಹೋಗು. ನಿನಗೆ ಶುಭವಾಗಲಿ.

**8** ಬರಪೀಡಿತ ಕಾಶೀಪಟ್ಟಣವನ್ನು ಕಾತ್ಯಾಯಿನಿಯು ತಲುಪಿದಳು. ಅಲ್ಲಿ ತನ್ನ ದಿವ್ಯಶಕ್ತಿಯಿಂದ ಸುಂದರ ವಾದ ಅರಮನೆಯೊಂದನ್ನು ನಿರ್ಮಿಸಿದಳು. ಕೈಯಲ್ಲಿ ಅಕ್ಷಯಪಾತ್ರೆಯನ್ನು ಧರಿಸಿ, ಅನ್ನಪೂರ್ಣೆಯಾಗಿ ವಿರಾಜಿಸಿದಳು. ಆ ಪಾತ್ರೆಯಿಂದ ಎಷ್ಟೇ ಭೋಜನ ವನ್ನು ನೀಡಿದರೂ ಅದು ಬರಿದಾಗುತ್ತಿರಲಿಲ್ಲ.




**9** ಬಂದವರೆಲ್ಲ ಊಟ ಮಾಡಿ ತೃಪ್ತರಾಗಿ, ಅನ್ನಪೂರ್ಣೆಯನ್ನು ಮನಸಾರೆ ಪ್ರಶಂಸಿಸುತ್ತಿದ್ದರು.




**10** ಬರದ ದೆಸೆಯಿಂದ ರಾಜನ ಉಗ್ರಾಣ ಬರಿ ದಾಗಿತ್ತು. ಆದರೆ ಅನ್ನಪೂರ್ಣೆಯು ತನ್ನ ಹತ್ತಿರ ಬಂದ ಎಲ್ಲರಿಗೂ ಪುಷ್ಕಳವಾದ ಭೋಜನವನ್ನು ನೀಡುತ್ತಿದ್ದಳು. ಎಷ್ಟೇ ಜನ ಬರಲಿ, ಎಲ್ಲರಿಗೂ ಊಟ ಸಿಗುತ್ತಿತ್ತು. ರಾಜನು ಇದು ಹೇಗೆ ಸಾಧ್ಯ ಎಂದು ತಿಳಿಯಬಯಸಿದನು. ಅನ್ನಪೂರ್ಣೆಯ ಬಳಿಗೆ ದೂತನೊಬ್ಬನನ್ನು ಕಳುಹಿಸಿದನು.

**11** ರಾಜದೂತನು ದೇವಿಯ ಮುಂದೆ ನಿಂತು ಪ್ರಣಾಮ ವನ್ನು ಮಾಡಿದನು.

